ಬೆಂಗಳೂರಿನ ಮಹಿಳಾಪಾಲಿಟೆಕ್ನಿಕಲ್‌ನಲ್ಲಿ ರಿಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಬಿ. ಜೋರಯ್ಯ ಹಾಗೂ ಶ್ರೀ ಆರ್. ನಾರಾಯಣಸ್ವಾಮಿ ಅವರುಗಳು ನಡೆಸಿರುವ ಅವ್ಯವಹಾರದ ಬಗ್ಗೆ

ಶ್ರೀ ಹೆಚ್. ಎಂ. ರೇವಣ್ಣ.—ಬೆಂಗಳೂರಿನ ಮಹಿಳಾ (ಸರ್ಕಾರಿ) ಪಾಲಿಟೆಕ್ನಿಕ್‌ನಲ್ಲಿ ರಿಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಬಿ. ಜೋರಯ್ಯನವರು ಆರ್. ನಾರಾಯಣಸ್ವಾಮಿ (ವಿದ್ಯುತ್ ಉಪನ್ಯಾಸಕ ರಾಯಚೂರು) ಅವರಿಗೆ ಸರ್ಕಾರದ ದಾಖಲಾತಿಗಳನ್ನು ಕದ್ದು ಕೊಟ್ಟಿರುವುದರಿಂದ ಶ್ರೀ ಆರ್. ನಾರಾಯಣಸ್ವಾಮಿಯು ವಿನಾಕಾರಣ ಕೆಲವು ಉಪಾನ್ಯಾಸಕರಿಗೆ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಒತ್ತಡತಂತ್ರ (ಬ್ಲಾಕ್‌ಮೇಲ್) ಮಾಡಿ ಕಿರುಕುಳ ನೀಡುತ್ತಿರುವುದರಿಂದ ಅಂತಹ ಉಪಾನ್ಯಾಸಕ ಮತ್ತು ಅಧಿಕಾರಿಗಳಿಗೆ ಮಾನಸಿಕ ವೇದನೆಯಾಗುತ್ತಿರುವುದರ ಬಗ್ಗೆ ಹಾಗೂ ಶ್ರೀ ನಾರಾಯಣಸ್ವಾಮಿ ಈ ಕೆಳಕಂಡ ದುಷ್ಕೃತ್ಯಗಳನ್ನು ಎಸಗಿದ್ದರೂ ಕೂಡ ಯಾವುದೇ ಕ್ರಮವನ್ನು ಶ್ರೀ ನಾರಾಯಣಸ್ವಾಮಿ ವಿರುದ್ಧ ಕೈಗೊಳ್ಳದಿರುವುದರಿಂದ ದಿನೇದಿನೇ ಇವರಿಂದ ಸರ್ಕಾರಕ್ಕೆ ಹಾಗೂ ಸಾರ್ವಜನಿಕರಿಗೆ ಆಗುತ್ತಿರುವ ಉಪಟಳ ಜಾಸ್ತಿಯಾಗಿರುವ ಬಗ್ಗೆ ಈ ವಿಷಯವನ್ನು ಪ್ರಸ್ತಾಪಿಸಲಾಗಿರುತ್ತದೆ.

೧) ಸರ್ಕಾರದ ದಾಖಲಾತಿಗಳನ್ನು (ಶ್ರೀ ಬಿ. ಜೋರಯ್ಯನಿಂದ) ಪಡೆದಿದ್ದರೂ.

೨) ಬೇರೆಯವರ ಹೆಸರಿನಲ್ಲಿರುವ ದಾಖಲಾತಿಗಳನ್ನು ಸಲ್ಲಿಸಿ ಮೋಟಾರು ಸೈಕಲ್ ಮುಂಗಡವನ್ನು ಪಡೆದಿರುವುದು ಸತ್ಯವಿದ್ದರೂ.

೩) ವರ್ಗಾವಣೆಯಾದಂದಿನಿಂದ ಯಾವುದೇ ತರಗತಿಗಳನ್ನು ತೆಗೆದುಕೊಳ್ಳದಿದ್ದರೂ,

೪) ಹಾಗೂ ಶಾಸಕರ ಭವನದಲ್ಲಿ ಸದಾ ರಾಜಕೀಯ ಮಾಡುತ್ತಿದ್ದರೂ, ಹಾಗೂ

೫) ಮೇಲಿನ ಅಧಿಕಾರವರ್ಗದವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದರೂ ಯಾವುದೇ ಕ್ರಮ ಜರುಗಿಸುತ್ತಿಲ್ಲದಿರುವುದು.

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—ಮಾನ್ಯ ಉಪಾಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಈ ಹೇಳಿಕೆಯನ್ನು ಸಭೆಯ ಮುಂದಿಡಲು ಬಯಸುತ್ತೇನೆ.

ಶ್ರೀ ಆರ್. ನಾರಾಯಣಸ್ವಾಮಿ, ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪಾಲಿಟೆಕ್ನಿಕ್‌ನ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ವಿಭಾಗದ ಉಪನ್ಯಾಸಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಇವರು ಬೆಂಗಳೂರಿನ ಎಸ್. ಜೆ. (ಸರ್ಕಾರಿ) ಪಾಲಿಟೆಕ್ನಿಕ್‌ನಲ್ಲಿ ಕೆಲಸ ಮಾಡುತ್ತಿದ್ದಾಗ, ಇವರ ಮೇಲಿನ ಆರೋಪಗಳ ಬಗ್ಗೆ ತನಿಖೆ ನಡೆಸುವ ಸಂದರ್ಭದಲ್ಲಿ ಇವರ ವಶದಲ್ಲಿದ್ದ ಆಲ್‌ಮೈರಾದಲ್ಲಿ, ಅನಧಿಕೃತವಾಗಿ ಹೊಂದಿದ್ದ ಕೆಲವು ಮುಖ್ಯ ಸರ್ಕಾರಿ ದಾಖಲಾತಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಆದರೆ, ಈ ದಾಖಲಾತಿಗಳ ಪ್ರತಿಗಳನ್ನು ಯಾರಿಂದ ಪಡೆದರೆಂಬ ಬಗ್ಗೆ ಮಾಹಿತಿ ಇರುವುದಿಲ್ಲ. ಮೈಸೂರಿನ ಪಿ.ಪಿ.ಸಿ. (ಸರ್ಕಾರಿ) ಪಾಲಿಟೆಕ್ನಿಕ್‌ನ ಪ್ರಾಂಶುಪಾಲರ ಕೊಠಡಿಯಲ್ಲಿ ನಡೆಯುತ್ತಿದ್ದ ಅಧಿಕಾರಿಗಳ ಸಭೆಯ ಮಧ್ಯೆ ಶ್ರೀ ಆರ್. ನಾರಾಯಣಸ್ವಾಮಿಯವರು ಅನುಮತಿ ಇಲ್ಲದೆ ಪ್ರವೇಶಿಸಿ, ತಾಂತ್ರಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳೊಡನೆ, ಅಸಭ್ಯ ರೀತಿಯಿಂದ ವರ್ತಿಸಿ, ಅವಾಚ್ಯ ಶಬ್ದಗಳನ್ನು ಬಳಸಿದ ಘಟನೆಯೂ ನಡೆದಿರುತ್ತದೆ. ಈ ಎರಡು ಘಟನೆಗಳ ಬಗ್ಗೆ, ಶ್ರೀ ಆರ್. ನಾರಾಯಣಸ್ವಾಮಿಯವರ ಮೇಲೆ ಇಲಾಖಾ ತನಿಖೆಯನ್ನು ಹೂಡಿದ್ದು, ಅವರ ಮೇಲಿನ ಈ ಎರಡೂ ಆರೋಪಗಳು ಸಾಬೀತಾಗಿರುತ್ತದೆ. ಈ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುತ್ತದೆ.

ಶ್ರೀ ಆರ್. ನಾರಾಯಣಸ್ವಾಮಿಯವರು, ಬೇರೆಯವರ ಹೆಸರಿನ ದಾಖಲಾತಿಗಳ ಆಧಾರದ ಮೇಲೆ ಮೋಟಾರ್ ಸೈಕಲ್ ಮುಂಗಡ ಪಡೆದಿರುವ ವಿಷಯ, ಈಗತಾನೇ ಸರ್ಕಾರದ ಗಮನಕ್ಕೆ ಬಂದಿದ್ದು, ಈ ಬಗ್ಗೆ ಪರಿಶೀಲಿಸಿ ಸೂಕ್ತ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಆರ್. ನಾರಾಯಣಸ್ವಾಮಿಯವರನ್ನು, ಕಳೆದ ಪಕ್ಷ ರಾಯಚೂರಿನ ಸರ್ಕಾರಿ ಪಾಲಿಟೆಕ್ನಿಕ್‌ಗೆ ವರ್ಗಾಯಿಸಲಾಗಿದ್ದು. ಅವರು ಅಲ್ಲಿ ಕೆಲಸಕ್ಕೆ ಹಾಜರಾಗಿ ಅನಂತರ ಬಹಳ ದಿನಗಳಿಂದ ಅನಧಿಕೃತವಾಗಿ ಗೈರುಹಾಜರಿಯಾಗಿ, ಪಾಠಪ್ರವಚನ ಸರಿಯಾಗಿ ಮಾಡದೇ ಇರುವ ವಿಷಯದ ಬಗ್ಗೆ ಸಂಬಂಧಿಸಿದ ಪ್ರಾಂಶುಪಾಲರಿಂದ ವರದಿ ಪಡೆದು, ಸೂಕ್ತ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

ಇವರು ಶಾಸಕರ ಭವನದಲ್ಲಿ ಸದಾ ಅಲೆದಾಡುತ್ತಿದ್ದು ಮತ್ತು ರಾಜಕೀಯ ಮಾಡುತ್ತಿರುವ ವಿಷಯದ ಬಗ್ಗೆ ಸರ್ಕಾರಕ್ಕೆ ಖಚಿತ ಮಾಹಿತಿ ಇರುವುದಿಲ್ಲ. ಈ ಬಗ್ಗೆ ಖಚಿತ ಮಾಹಿತಿ ದೊರೆತರೆ, ಆ ಬಗ್ಗೆ ಕಾನೂನು ರೀತ್ಯ ಅವರ ಮೇಲೆ ಸೂಕ್ತ ಶಿಸ್ತಿನ ಕ್ರಮಕೈಗೊಳ್ಳಲಾಗುವುದು.

ಮೂಡಿಗೆರೆ ಜೂನಿಯರ್ ಕಾಲೇಜಿನಲ್ಲಿ ಹೆಚ್ಚಿನ ತರಗತಿಗಳನ್ನು ಮಂಜೂರು ಮಾಡುವ ಬಗ್ಗೆ

ಶ್ರೀಮತಿ ಮೋಟಮ್ಮ.—ಮಾನ್ಯ ಉಪಾಧ್ಯಕ್ಷರೇ, ಮೂಡಿಗೆರೆ ತಾಲ್ಲೂಕಿನಲ್ಲಿ ಕೇವಲ ೩ ಜೂನಿಯರ್ ಕಾಲೇಜುಗಳಿದ್ದು ೮ ಹೈಸ್ಕೂಲುಗಳಿರುತ್ತವೆ. ಈ ಸಾರಿ ಎಸ್‌ಎಸ್‌ಎಲ್‌ಸಿಯಲ್ಲಿ ಬಹಳ ವಿದ್ಯಾರ್ಥಿಗಳು ಪಿ.ಟ್ಗಾಗಿ ಪರದಾಡುತ್ತಿರುವುದು ಬಹಳ ಶೋಚನೀಯ ಸಂಗತಿಯಾಗಿದೆ. ವಿದ್ಯಾ ವಮಂತ್ರಿಗಳು ತಮ್ಮ ಇಲಾಖೆ ಬೇಡಿಕೆಗೆ ಉತ್ತರಿಸುತ್ತಾ, ಹೆಚ್ಚುವರಿ ತರಗತಿಗಳನ್ನು ನಡೆಸಲು ಅವಕಾಶ ಮಾಡಿಕೊಡುವುದಾಗಿ ಹೇಳಿರುತ್ತಾರೆ. ಆದರೆ ಇದುವರೆಗೂ ಯಾವುದೇ ಜೂನಿಯರ್ ಕಾಲೇಜಿಗೆ ಆದೇಶ ತಲುಪಿಲ್ಲ. ದಯಮಾಡಿ ಕೂಡಲೇ ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ವಿದ್ಯಾ ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಉಪಾಧ್ಯಕ್ಷರೇ ನಾನು ಈಗಾಗಲೇ ಆದೇಶ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಅಲ್ಲಿ ಕಾರ್ಯಕ್ರಮ ತೆಗೆದುಕೊಳ್ಳದೇ ಹೋಗಿದ್ದರೆ ಅದನ್ನು ಜಾಗ್ರತೆ ಮಾಡಿಸುತ್ತೇನೆ.

ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನಲ್ಲಿ ನೇಕಾರರಿಗೆ ವಸತಿಗೃಹ ಮತ್ತು ವರ್ಕ್‌ಶೆಡ್ ಕಟ್ಟುವ ಬಗ್ಗೆ

ಶ್ರೀ ಶಿವಾನಂದ ಪೆಚ್. ಕೌಜಲಗಿ.—ಮಾನ್ಯ ಉಪಾಧ್ಯಕ್ಷರೇ ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಪೈಕಿ ಪಕ್ಕಂದ ಗ್ರಾಮದಲ್ಲಿ ನೇಕಾರರಿಗೆ ವಸತಿ ಗೃಹ ಮತ್ತು 'ವರ್ಕ್‌ಶೆಡ್' ಕಟ್ಟುವ ಬೇಡಿಕೆ ಬಹಳ ದಿನಗಳಿಂದ ಇದೆ. ಈ ಬಗ್ಗೆ ಪುಲಪ್ರಭಾ ಯೋಜನೆಯವರು ೪ ಎಕರೆ ಜಮೀನನ್ನು ಪುಕ್ಕಟೆಯಾಗಿ ಈಗಾಗಲೇ ಸರ್ಕಾರಕ್ಕೆ ಕೊಟ್ಟಿದ್ದಾರೆ. ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರು ಸಹ ಅಲ್ಲಿಗೆ ಬಂದಾಗ ಇಲ್ಲಿ ನೇಕಾರರಿಗೆ ಮನೆಗಳನ್ನು ಮತ್ತು 'ವರ್ಕ್‌ಶೆಡ್' ಕಟ್ಟುವ ಸಲುವಾಗಿ ಆಶ್ವಾಸನೆ ಕೊಟ್ಟಿದ್ದರು. ಆದಕಾರಣ ಇಲ್ಲಿ ಇವುಗಳನ್ನು ಕಟ್ಟಿಸಿಕೊಡುವ ಬಗ್ಗೆ ತಮ್ಮ ಮುಖಾಂತರ ಮಾನ್ಯ ಉದ್ದಿಮೆ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀಮತಿ ಸರೋಜಾ ವಸಂತ (ಕೈಗಾರಿಕಾ ರಾಜ್ಯ ಸಚಿವರು).—ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು, ಬೆಳಗಾಂ ಜಿಲ್ಲೆಯ ಬೈಲಹೊಂಗಲದಲ್ಲಿ ತನ್ನ ಉತ್ಪಾದನ ಕೇಂದ್ರವನ್ನು ಹೊಂದಿದ್ದು, ಒಕ್ಕಂದ ಗ್ರಾಮದಲ್ಲಿನ ನೇಕಾರರೂ ಸೇರಿದಂತೆ ಈ ಕೇಂದ್ರದಲ್ಲಿ ೧೨೦ ಮಗ್ಗಗಳನ್ನು ಆಳವಡಿಸಿಕೊಳ್ಳಲಾಗಿದೆ. ಒಕ್ಕುಂದ ಗ್ರಾಮವೂ ಬೈಲಹೊಂಗಲದಿಂದ ೧೫ ಕಿ.ಮೀ. ದೂರದಲ್ಲಿದ್ದು ಈ ಗ್ರಾಮದಲ್ಲಿ ನಿಗಮವು ೫೦ ಮಗ್ಗಗಳನ್ನು ಆಳವಡಿಸಿಕೊಂಡಿದೆ. ಈ ಗ್ರಾಮದ ನೇಕಾರರೂ ಬೈಲಹೊಂಗಲ ಉಪಕೇಂದ್ರದಿಂದ ನೂಲು ಮತ್ತು ಇತರೆ ಕಚ್ಚಾ ಪದಾರ್ಥಗಳನ್ನು ಪಡೆದು ನೆಯ್ದ ಬಟ್ಟೆಯನ್ನು ಬೈಲಹೊಂಗಲ ಉಪಕೇಂದ್ರಕ್ಕೆ ಹಿಂತಿರುಗಿಸುತ್ತಾರೆ.

ಡಚ್ ನೆರವಿನ ''ಕರ್ನಾಟಕ ಇಂಡಸ್ಟ್ರೀಯಲ್ ಷೆಡ್ಸ್ ಯೋಜನೆ''ಯು ಮೊದಲನೇ ಹಂತದಲ್ಲಿ ನಿಗಮವು ಕೈಮಗ್ಗ ನೇಕಾರರಿಗೆ ರಾಜ್ಯದಲ್ಲಿನ ೨೫ ಸ್ಥಳಗಳಲ್ಲಿ ೧೯೪೨ ವಸತಿ ಹಾಗೂ ಕಾರ್ಯಗಾರಗಳನ್ನು ಒದಗಿಸಿದೆ. ಮೊದಲನೇ ಹಂತದ ಯೋಜನೆಯನ್ನು ೧೯೮೭ರಲ್ಲಿ ಪೂರ್ಣಗೊಳಿಸಲಾಯಿತು. ಮೊದಲನೇ